ದೂರನ್ನು ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು.

1 ನೇ ಆರೋಪಿಯನ್ನು 2 ನೇ ಆರೋಪಿ ಪರಿಚಯ ಮಾಡಿಸಿದರೆಂದು, 1 ನೇ ಆರೋಪಿಯು ತಾನು ಸೊಂಡೇಕೊಪ್ಪ ಗ್ರಾಮದ ಸರ್ವೆ ನಂ. 4/2 ರಲ್ಲಿಯ 19 ಗುಂಟೆ ಜಮೀನಿಗೆ ಸಂಪೂರ್ಣ ಮಾಲೀಕನೆಂದು, ಅದು ತನಗೆ ತನ್ನ ತಂದೆಯಿಂದ ಬಂದ ಆಸ್ತಿ ಎಂದು, ಫಿರ್ಯಾದಿಗೆ ಹೇಳಿ ಸದರಿ ಆಸ್ತಿಯನ್ನು 22,80,000/- ರೂಪಾಯಿಗಳಿಗೆ ಮಾರಾಟ ಮಾಡಲು ಒಪ್ಪಿ ಅದರಂತೆ ದಿನಾಂಕ 30/07/2020 ರಂದು 10,00,000/- ರೂಪಾಯಿಗಳನ್ನು ಮಹಾಲಕ್ಷ್ಮಿ ಲೇಔಟ್ ಠಾಣಾ ವ್ಯಾಪ್ತಿಯ ಮೋದಿ ರಸ್ತೆಯ ಕದಂಬ ಹೋಟೆಲ್ ನಲ್ಲಿ ಪಡೆದುಕೊಂಡು, ಉಳಿದ 12,80,000/- ರೂಪಾಯಿಗಳನ್ನು ನೊಂದಾಯಿತ ಖರೀದಿ ಪತ್ರದ ಸಮಯದಲ್ಲಿ ಕೊಡುವುದಾಗಿ ಫಿರ್ಯಾದಿ ಒಪ್ಪಿದ್ದರೆಂದು ದೂರಿನಲ್ಲಿ ವಿವರಿಸಲಾಗಿದೆ. 3

ಮತ್ತು 4 ನೇ ಆರೋಪಿತರು 1ನೇ ಆರೋಪಿಯ ಅಳಿಯಂದಿರು. 1ನೇ ಆರೋಪಿ ಕರಾರಿನಂತೆ ನಡೆದುಕೊಳ್ಳದೆ ಸದರಿ ಸ್ವತ್ತನ್ನು ತನ್ನ ಮಕ್ಕಳಿಗೆ ನೊಂದಾಯಿತ ದಾನ ಪತ್ರದ ಮೂಲಕ ಕೊಟ್ಟಿರುವರೆಂದು ಆಪಾದಿಸಲಾಗಿದೆ. ಆದುದರಿಂದ ಆರೋಪಿತರು ಫಿರ್ಯಾದಿಗೆ ನಂಬಿಕೆ ದ್ರೋಹ ಮತ್ತು ವಂಚನೆ ಮಾಡಿರುವರೆಂದು ದೂರಿನಲ್ಲಿ ಆಪಾದಿಸಲಾಗಿದೆ. ಈ ಸಂಬಂಧ ಮಹಾಲಕ್ಷ್ಮಿ ಲೇಔಟ್ ಆರಕ್ಷಕ ಠಾಣೆಯ ಠಾಣಾಧಿಕಾರಿಗಳಿಗೆ ಮತ್ತು ಪೊಲೀಸ್ ಆಯುಕ್ತರಿಗೆ ದೂರು ನೀಡಿದ್ದರೂ ಸಹ ಆರೋಪಿತರ ವಿರುದ್ದ ಯಾವುದೇ ಕ್ರಮ ತೆಗೆದುಕೊಂಡಿಲ್ಲವೆಂದು ದೂರಿನಲ್ಲಿ ಆಪಾದಿಸಲಾಗಿದೆ. ದೂರಿನೊಂದಿಗೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ದೂರಿನಲ್ಲಿಯ ಸಂಗತಿಗಳು ನಿಜವಾಗಿವೆ ಎಂದು ಫಿರ್ಯಾದಿ ಹೇಳಿದ್ದಾರೆ, ದೂರಿನಲ್ಲಿ ಉಲ್ಲೇಖಿಸಿದ ದಾಖಲೆಗಳ ಪ್ರತಿಗಳನ್ನು ಫಿರ್ಯಾದಿಯು ಹಾಜರು ಪಡಿಸಿದ್ದಾರೆ. ದಂ.ಪ್ರ.ಸಂ. ಕಲಂ. 154(1) ಮತ್ತು 154(3) ರ ಅಡಿಯಲ್ಲಿನ ನಿಬಂಧನೆಗಳನ್ನು ಸಹ ಫಿರ್ಯಾದಿ ಪಾಲಿಸಿದ್ದಾರೆ. ದೂರಿನಲ್ಲಿ ಆಪಾದಿಸಿದ ಸಂಗತಿಗಳು ಗಂಭೀರ ಸ್ವರೂಪಗಳಾಗಿರುವುದರಿಂದ ಪ್ರಕಣದ ಸಂತ್ಯಾಂಶಗಳನ್ನು ತಿಳಿಯಲು ತನಿಖೆಗೆ ಆದೇಶಿಸುವುದು ಸಮಂಜಸವೆಂದು ತೀರ್ಮಾನಿಸಿ ಕೆಳಗಿನಂತೆಃ

**ಆದೇಶ**

ದಂ.ಪ್ರ.ಸಂ. ಕಲಂ. 156(3) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರಕರಣದ ತನಿಖೆ ಮಾಡಿ, ಅಂತಿಮ ವರದಿಯನ್ನು ಸಲ್ಲಿಸುವಂತೆ ಮಹಾಲಕ್ಷ್ಮಿ ಲೇಔಟ್ ಆರಕ್ಷಕ ಠಾಣೆಯ ಆರಕ್ಷಕ ಉಪನಿರೀಕ್ಷಕರಿಗೆ ಆದೇಶಿಸಲಾಗಿದೆ.

ಅದೇ ರೀತಿ ನಿರ್ದೇಶನವನ್ನು ನೀಡಲು ಆದೇಶಿಸಿದೆ.

ಅಂತಿಮ ವರದಿಗಾಗಿ ಪ್ರಕರಣವನ್ನು ದಿನಾಂಕ 08/09/2023 ಕ್ಕೆ ಮುಂದೂಡಿದೆ.

3 ನೇ ಎ.ಸಿ.ಎಮ್.ಎಮ್. ನ್ಯಾ,

ಬೆಂಗಳೂರು.